89 (14) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗ ತಾಲ್ಲೂಕು ಮುಳಗುಂದ ಪಟ್ಟಣದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕಟ್ಟಡ ನಿರ್ಮಾಣಕ್ಕಾಗಿ ಜಾಗವನ್ನು ಕೊಡಲು ಜಮೀನು ಮಾಲೀಕರು ಒಪ್ಪಿದ್ದು ಅವರ ಒಪ್ಪಿಗೆಯಂತೆ ಜಮೀನನ್ನು ಖರೀದಿಸಲಾಗುವುದೆ;

ಆ) ಜಮೀನನ್ನು ಖರೀದಿಸಿ ಕಟ್ಟಡವನ್ನು ನಿರ್ಮಾಣ ಮಾಡಲಾಗುವುದೇ ಹಾಗೂ ಯಾವಾಗ ಈ ಕಟ್ಟಡದ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಜಮೀನು ಖರೀದಿ ಸಮಿತಿಯು ಮುಳಗುಂದ ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡಕ್ಕಾಗಿ ಮುಳಗುಂದ ಗ್ರಾಮದ ಸರ್ವೆ ನಂ. 337/2 ಮತ್ತು 326/2 ರಲ್ಲಿ ಒಟ್ಟು 712 ಎಕರೆ ಜಮೀನನ್ನು ಸಂಬಂಧಪಟ್ಟ ಭೂ ಮಾಲೀಕರಿಂದ ಜಮೀನು ಖರೀದಿಸಲು ಶಿಫಾರಸ್ಸು ಮಾಡಿದೆ. ಭೂಮಾಲೀಕರಿಂದ ಜಮೀನು ಮಾರಾಟ ಮಾಡಲು ಒಪ್ಪಿಗೆ ಪತ್ರ ನೀಡುವಂತೆ ಪತ್ರ ಬರೆಯಲಾಗಿದೆ. ಒಪ್ಪಿಗೆ ಪತ್ರ ಬಂದ ನಂತರದ ಜಮೀನು ಖರೀದಿಸಲಾಗುವುದು.

ಆ) ಜಮೀನು ಖರೀದಿಯ ನಂತರ 2006-07ನೇ ಸಾಲಿನ ಆಯವ್ಯಯದ ಅನುದಾನದ ಲಭ್ಯತೆಯ ಮೇರೆಗೆ ಆಧ್ಯತೆ ನೀಡಿ ಶಾಲಾ ಸಂಕೀರ್ಣ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು.

90 (16) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ. ಯಿಂದ ಹಂಚಿಕೆ ಆಗಿರುವ ನಿವೇಶನಕ್ಕೆ ಹೆಚ್ಚಿಸಿದ ಬೆಲೆಯನ್ನು ಪಾವತಿಸದೇ ನಿವೇಶನವನ್ನು ಹಸ್ತಾಂತರಿಸುವಂತೆ ಮಾನ್ಯ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 12-7-2005ರಂದು ನಡೆದ ಸಭೆಯಲ್ಲಿ ತೀರ್ಮಾನಿಸಿದ್ದು ನಿಜವಲ್ಲವೇ;

ಆ) ಅದರಂತೆ ನಿವೇಶನವನ್ನು ಪಡೆದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಂಡಿರುವುದೇ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಅ) ಮಾನ್ಯ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 12-7-2005ರಂದು ನಡೆದ ಸಭೆ ಹಾಗೂ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಬಗ್ಗೆ ಇಲಾಖೆಗೆ ತಿಳಿದಿರುವುದಿಲ್ಲ. ಆದ್ದರಿಂದ ಹೆಚ್ಚಿಸಿದ ಮೌಲ್ಯ ನೀಡದೆ ನಿವೇಶನವನ್ನು ಪಡೆಯುವ ಪ್ರಸ್ತಾವನೆ ಇಲಾಖೆ ಮುಂದೆ ಇರುವುದಿಲ್ಲ.

ಆ) ಈಗಾಗಲೇ ಕೆ.ಐ.ಎ.ಡಿ.ಬಿ. ಯಿಂದ ಜಮೀನು ಖರೀದಿಸಲು 2004-05ನೇ ಸಾಲಿನಲ್ಲಿ ರೂ. 2,96,400/-ಗಳನ್ನು ಬಿಡುಗಡೆಗೊಳಿಸಲಾಗಿದ್ದು, 2005-06ನೇ ಸಾಲಿಗೆ ಬಾಕಿ ಬಡ್ಡಿ ಮೊತ್ತ ರೂ. 1,27,134/-ಗಳನ್ನು ಸಹ ಮಂಜೂರು ಮಾಡಿದ್ದು ನಿವೇಶನವನ್ನು ಸ್ವಾಧೀನ ಪಡಿಸಿಕೊಂಡ ನಂತರ ಪಿಡಬ್ಲ್ಯೂಡಿ ಯವರಿಂದ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿ ಬಂದ ನಂತರ ಮತ್ತು ಅನುದಾನ ಲಭ್ಯತೆ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.